## ನಿವೇದನೆ

# ಕನ್ನಡ ಗಂಗೋತ್ರಿಯಲ್ಲಿ ಮಾಲಿನ್ಯ ಕೊಳೆ ತೊಳೆಯಲಿದು ತಕ್ಕ ಸಮಯ

ಕನ್ನಡಿಗರ ಆತ್ಮವಿಶ್ವಾಸ, ಅಭಿಮಾನಗಳನ್ನು ಹೆಚ್ಚಿಸಬೇಕಾದ ಸಂಸ್ಥೆ ಲಜ್ಜೆಗೇಡಿ ಆಗಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಕನ್ನಡ ವಿಶ್ವವಿದ್ಯಾಲಯವನ್ನು ಸ್ವಚ್ಛಗೊಳಿಸುವ ಕೆಲಸ ಕನ್ನಡವನ್ನು ಕಟ್ಟುವ ಕೆಲಸವೂ ಹೌದು.

ಸರ್ಕಾರಿ ಮತ್ತು ಸಾರ್ವಜನಿಕ ವ್ಯವಹಾರಗಳಲ್ಲಿ ಲಂಚ ವ್ಯಾಪಕವಾಗಿರುವ ದೇಶಗಳ ಪೈಕಿ ಭಾರತ 82ನೇ ಸ್ಥಾನದಲ್ಲಿರುವ ಸುದ್ದಿ ಪ್ರಕಟವಾಗಿರುವ ಸಂದರ್ಭದಲ್ಲೇ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿನ ಭ್ರಷ್ಟಾಚಾರ ಪ್ರಕರಣಗಳೂ ಬೆಳಕಿಗೆ ಬಂದಿವೆ. ನಾಡು–ನುಡಿ ಸಂವೇದನೆಗೆ ಸಂಬಂಧಿಸಿದ ವಿಶ್ವವಿದ್ಯಾಲಯವೇ ಭ್ರಷ್ಟಾಚಾರದ ಗಂಗೋತ್ರಿಯಾಗಿ ರೂಪು ತಳೆದಿರುವುದು, ಸಾರ್ವಜನಿಕ ಜೀವನದಲ್ಲಿನ ಲಂಚ–ಭ್ರಷ್ಟಾಚಾರ ಬೇರುಮಟ್ಟದಲ್ಲಿ ವ್ಯಾಪಿಸಿರುವುದನ್ನು ಸೂಚಿಸುವಂತಿದೆ.

ಸರ್ಕಾರದ ಜೊತೆಗಿನ ವ್ಯವಹಾರ ಸಂವಹನಗಳು, ಲಂಚ ತಡೆ, ಸರ್ಕಾರ ಮತ್ತು ನಾಗರಿಕ ಸೇವೆಯಲ್ಲಿ ಪಾರದರ್ಶಕತೆ ಹಾಗೂ ಮಾಧ್ಯಮ ಪಾತ್ರವನ್ನು ಒಳಗೊಂಡಿರುವ ನಾಗರಿಕ ಸಮಾಜದ ಮೇಲ್ವಿಚಾರಣೆಯ ಸಾಮರ್ಥ್ಯವನ್ನು ಆಧರಿಸಿ 'ಟ್ರೇಸ್' ಎನ್ನುವ ಸಂಸ್ಥೆ ಲಂಚದ ಅಪಾಯದ ಸೂಚ್ಯಂಕಗಳನ್ನು ನೀಡುತ್ತದೆ. ಈ ಶ್ರೇಯಾಂಕ ಪಟ್ಟಿಯಲ್ಲಿ ಕಳೆದ ವರ್ಷ 77ನೇ ಸ್ಥಾನದಲ್ಲಿದ್ದ ಭಾರತ, ಈಗ ಐದು ಸ್ಥಾನಗಳ ಹೆಚ್ಚಳದ ಅಪಖ್ಯಾತಿಗೆ ಪಾತ್ರವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಭ್ರಷ್ಟಾಚಾರ ಎನ್ನುವುದು ಸಾರ್ವಜನಿಕ ವಲಯದಲ್ಲಿ ಸ್ವೀಕೃತ ಎನ್ನುವಷ್ಟರಮಟ್ಟಿಗೆ ಸಹಜವಾಗಿದ್ದು, ಲಂಚಗುಳಿತನ ಇಲ್ಲದ ಕ್ಷೇತ್ರವೇ ಇಲ್ಲವೆನ್ನುವಂತಾಗಿದೆ. ಇಷ್ಟಾದರೂ ಕೆಲವು ಕ್ಷೇತ್ರಗಳಲ್ಲಿ ನೈತಿಕತೆ ಇರಬೇಕೆಂದು ಸಮಾಜ ಅಪೇಕ್ಷಿಸುತ್ತದೆ. ಅಂಥ ಕ್ಷೇತ್ರಗಳಲ್ಲಿ ಶಿಕ್ಷಣ ಹಾಗೂ ಆರೋಗ್ಯ ಮುಖ್ಯವಾದವು. ಆರೋಗ್ಯ ವಲಯದಲ್ಲಿನ ಭ್ರಷ್ಟಾಚಾರ ಹಾಗೂ ಕ್ರೌರ್ಯವನ್ನು ಕೊರೊನಾ ಸಂದರ್ಭ ನಮಗೆ ಮತ್ತೆ ಮತ್ತೆ ಮನದಟ್ಟು ಮಾಡಿಸಿದೆ. ಶಿಕ್ಷಣ ಕ್ಷೇತ್ರದಲ್ಲೂ ಲಂಚಗುಳಿತನದ ಪ್ರಕರಣಗಳು ಆಗಾಗ ವರದಿಯಾಗುತ್ತಿದ್ದರೂ, ಕನ್ನಡಪ್ರಜ್ಞೆಯ ಪ್ರತೀಕ ಎಂದು ಭಾವಿಸಲಾಗುವ 'ಕನ್ನಡ ವಿಶ್ವವಿದ್ಯಾಲಯ'ದಲ್ಲೇ ಅವ್ಯವಹಾರಗಳು ನಡೆಯುತ್ತಿರುವುದು ಹೆಚ್ಚಿನ ಆತಂಕ ಹುಟ್ಟಿಸುವಂತಹದ್ದು.

ಕರ್ನಾಟಕದ ಇತರ ವಿಶ್ವವಿದ್ಯಾಲಯಗಳಿಗೆ ಇಲ್ಲದ ವಿಶೇಷ ಸ್ಥಾನ ಕನ್ನಡ ವಿ.ವಿ.ಗೆ ಸಂಬಂಧಿಸಿದಂತೆ ಜನಮನದಲ್ಲಿದೆ. ಆ ಕಾರಣದಿಂದಲೇ ಹಂಪಿ ವಿ.ವಿ.ಗೆ ಸಂಬಂಧಿಸಿದ ಸಣ್ಣ ಸಂಗತಿಗೂ ನಾಡು–ನುಡಿಗೆ ಸಂಬಂಧಿಸಿದ ಸಮಸ್ಯೆ ಎನ್ನುವಂತೆ ಕನ್ನಡಿಗರು ಸ್ಪಂದಿಸುತ್ತಾರೆ. ವಿಶ್ವವಿದ್ಯಾಲಯಕ್ಕೆ ಅನುದಾನ ಕಡಿತ ಮಾಡಿದ ಸರ್ಕಾರದ ನಿರ್ಧಾರದ ವಿರುದ್ಧ 2020ರ ಡಿಸೆಂಬರ್‌ನಲ್ಲಿ ಸಾರ್ವಜನಿಕ ಪ್ರತಿರೋಧ ದೊಡ್ಡ ಮಟ್ಟದಲ್ಲಿ ವ್ಯಕ್ತವಾಗಿತ್ತು. ಕನ್ನಡದ ಕೆಲಸಕ್ಕಾಗಿ ರೂಪುಗೊಂಡಿರುವ ವಿಶ್ವವಿದ್ಯಾಲಯದ ಚಟುವಟಿಕೆಗಳಿಗೆ ಹಣ ನೀಡುವಲ್ಲಿ ಸರ್ಕಾರ ಜುಗ್ಗತನ ಮಾಡಬಾರದು ಎನ್ನುವ ಜನಾಭಿಪ್ರಾಯ ವ್ಯಕ್ತವಾಗಿತ್ತು. ವಿಶ್ವವಿದ್ಯಾಲಯದ ಸಿಂಡಿಕೇಟ್ ನೇಮಕಗಳಲ್ಲಿ ರಾಜಕೀಯ ಹಿತಾಸಕ್ತಿ ಕಾಣಿಸಿದಾಗ ಹಾಗೂ ಆಡಳಿತ ಪಕ್ಷದೊಂದಿಗೆ ನಂಟು ಹೊಂದಿರುವ ಉದ್ಯಮಿಗೆ 'ನಾಡೋಜ' ಗೌರವ ನೀಡಿದಾಗ ಸಾಂಸ್ಕೃತಿಕ ವಲಯದಲ್ಲಿ ವಿರೋಧ ವ್ಯಕ್ತವಾಗಿತ್ತು. ಇವೆಲ್ಲ ವಿರೋಧಗಳನ್ನು ಕನ್ನಡಿಗ ಹಾಗೂ ಕನ್ನಡ ವಿ.ವಿ. ನಡುವಣ ನಂಟಿನ ರೂಪದಲ್ಲಿಯೇ ನೋಡಬೇಕು.

ಭಾಷೆಯೆನ್ನುವುದು ಸಂವಹನದ ಮಾಧ್ಯಮವಷ್ಟೇ ಅಲ್ಲ, ಅದಕ್ಕೆ ನೈತಿಕತೆಯ ಸ್ವರೂಪವೂ ಇದೆ. ಈ ನೈತಿಕತೆಯನ್ನು ಕನ್ನಡ ವಿ.ವಿ.ಯಲ್ಲಿ ಅಪೇಕ್ಷಿಸುವುದು ಅಸಹಜವೇನಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ಅನೈತಿಕ ಎನ್ನಬಹುದಾದ ವ್ಯವಹಾರಗಳೇ ವಿಶ್ವವಿದ್ಯಾಲಯದಲ್ಲಿ ಹೆಚ್ಚು ನಡೆಯುತ್ತಿರುವಂತಿದೆ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಜೊತೆಗೆ ವಿದ್ಯಾರ್ಥಿಗಳೂ ಆಡಳಿತ ಮಂಡಳಿಯ ಲಂಚಗುಳಿತನದ ಬಗ್ಗೆ ದನಿಯೆತ್ತಿದ್ದಾರೆ. ನಿವೃತ್ತ ಕುಲಪತಿ ಹಾಗೂ ಪ್ರಾಧ್ಯಾಪಕರು, ತಮ್ಮ ಒಪ್ಪಿಗೆಯಿಲ್ಲದೆ ಪಿಂಚಣಿಯಿಂದ ಹಣ ಕಡಿತ ಮಾಡುತ್ತಿರುವುದನ್ನು ಆಕ್ಷೇಪಿಸಿ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ಫೆಲೋಶಿಪ್ ಬಾಕಿ ಉಳಿಸಿಕೊಂಡಿರುವ ಬಗ್ಗೆ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ. ಸಹಾಯಧನ ನೀಡದಿರುವ ಮೂಲಕ ದಲಿತ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದಿಂದ ವಂಚಿಲಾಗುತ್ತಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಮೀಸಲಾತಿ ನಿಯಮಗಳನ್ನು ಗಾಳಿಗೆ ತೂರಿ ಬೋಧಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸುತ್ತಿರುವ ಆರೋಪವನ್ನೂ ವಿ.ವಿ. ಎದುರಿಸುತ್ತಿದೆ. ಬಹುಶಃ, ಇದೇ ಮೊದಲ ಬಾರಿಗೆ ಕರ್ನಾಟಕದ ವಿಶ್ವವಿದ್ಯಾಲಯವೊಂದು ಮೈಯೆಲ್ಲ ಕೊಳಕು ಮೆತ್ತಿಕೊಂಡು ಬಯಲಿನಲ್ಲಿ ನಿಂತಿದೆ.

ಕನ್ನಡ ವಿ.ವಿ.ಗೆ ಸಂಬಂಧಿಸಿದ ಆರೋಪಗಳು ವಿಶ್ವವಿದ್ಯಾಲಯವೊಂದರಲ್ಲಿ ನಡೆಯುತ್ತಿರುವ ಅವ್ಯವಹಾರಗಳು ಎಂದು ಸರಳವಾಗಿ ಭಾವಿಸಲಾಗದು. ವಿಶ್ವವಿದ್ಯಾಲಯಕ್ಕೆ ಅನುದಾನ ಕಡಿತಗೊಂಡಾಗ ಆತಂಕಪಟ್ಟ ಕನ್ನಡಪ್ರೇಮಿಗಳು, ಈಗ ಅದೇ ವಿಶ್ವವಿದ್ಯಾಲಯ ಲಂಚದ ಆರೋಪಗಳ ಕೂಪದಲ್ಲಿ ಸಿಲುಕಿರುವುದನ್ನು ಅರಗಿಸಿಕೊಳ್ಳುವುದು ಕಷ್ಟ. ಕನ್ನಡದ ಅಸ್ಮಿತೆಯನ್ನು ಲೋಕದೆದುರು ಅನಾವರಣಗೊಳಿಸಬೇಕಾದ ಹಾಗೂ ಕನ್ನಡಿಗರ ಆತ್ಮವಿಶ್ವಾಸ, ಅಭಿಮಾನಗಳನ್ನು ಹೆಚ್ಚಿಸಬೇಕಾದ ಸಂಸ್ಥೆ ಇಷ್ಟೊಂದು ದುರ್ಬಲವಾಗಿ ಕಾಣಿಸುತ್ತಿರುವುದನ್ನು, ಲಜ್ಜೆಗೇಡಿ ಆಗಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಕನ್ನಡ ವಿಶ್ವವಿದ್ಯಾಲಯವನ್ನು ಸ್ವಚ್ಛಗೊಳಿಸುವ ಕೆಲಸ ಕನ್ನಡವನ್ನು ಕಟ್ಟುವ ಕೆಲಸವೂ ಹೌದು.

■ ರಘುನಾಥ ಚ.ಹ.


ಈಶ್ವರ್